ARCHDIOCESE OF BANGALORE

Archbishop's House, No. 75 Miller's Road, Benson Town Post, Bengaluru-560 046
KARNATAKA, INDIA. Tel.: 91+ (080) 23330438 / 23330838 / 23339199
Archdiocese of Bangalore Bangalore Archdiocese

Most Rev. Peter Machado
Archbishop of Bangalore

E-mail: archbishop@bangalorearchdiocese.com
Web. : www.bangalorearchdiocese.org

Ref. No.:

Dated: 16th May, 2022

To,
His Excellency
Shri. Thawar Chand Gehlot
Hon'ble Governor of Karnataka
Rajbhavan, Rajbhavan Road
Dr. Ambedkar Veedhi
Bengaluru – 560 001

Your Excellency,

Subject: **Appeal to refrain from giving ascent to the Protection of Religious Freedom Bill proposed by the Government of Karnataka.**

*****

The entire Christian Community in Karnataka opposes the proposal of Protection of Religious Freedom Bill also known as Anti-Conversion Bill in one voice and questions the need for such an exercise when sufficient laws and court directives are in place to monitor any aberration of the existing laws. The Indian Constitution Article 25 very clearly says, *"Freedom of conscience and free profession, practice and propagation of religion subject to public order, morality and health."* Further, Article 26 says that, *"All denominations can manage their own affairs in matters of religion."* And, therefore, introducing such laws would infringe the rights of the citizens, especially of the minority communities.

The Backward Classes and Minorities Welfare Departments of Government of Karnataka had earlier issued an Order to conduct a survey of both official and non-official Christian Missionaries and the Institutions and Establishments functioning in the State. When all the relevant data is already available (through the Census) with the Government, why do we need yet another futile exercise? Why only Christian Minority Community is targeted and marked for this arbitrary, fallacious and illogical move? What is the motive that is driving them to do so?

It is a well-known fact that thousands of schools, colleges and hospitals are run and managed by Christian Community across the State and Country as well. We are happy to say that lakhs and lakhs of students are studying now and have studied in the past in the Christian Institutions and, most of them, are holding responsible

positions and are placed in high offices today. Hundreds and thousands of Judges, IAS Officers, Ministers, Politicians, who have occupied/occupying key positions in the country, are proud to have studied in the Christian institutions. May we reiterate the point that not a single incident of forced conversion has been reported so far. Then, where is the complaint coming from and what is the motive behind such false and fabricated news? Let the Government prove whether any one of them has ever been influenced, compelled or coerced to change his or her religion.

Everyone in the state and country knows that lakhs of patients, especially the poor, irrespective of their caste, creed or religion, have been receiving the best of medical attention and treatment from the Christian run hospitals, healthcare centers, and rehabilitation centres across the Country and State. There have been no reports or instances where they have been forced to convert or have been pursued to change his or her religion. The service rendered is purely on humanitarian grounds and surely not with any malafide motives. Such being the case, we fail to understand the need for such a Bill.

It is indeed a matter of great concern that anti-conversion bill would become a tool for the fringe elements to take law into their own hands, and vitiate the atmosphere with provocations, false accusations, communal unrest in the otherwise peaceful State of Karnataka.

A few stray and sporadic incidents of conversion should not portray the entire community in bad light. Government's statistics proves beyond doubt that, since independence, there has been hardly any growth in conversions, and it is all fabricated to suit the political agendas of some political parties. According to Census data of India, the percentage of Christian Population in the Country in 2001 was 2.34 percent. And, as per the Census data of India-2011, the Christian Population declined marginally from 2.34 percent to 2.30 percent. Also, in the State of Karnataka, the situation is in no way different. The statistics gives a clear picture that the Christian Population in the State of Karnataka, during the 2001 census, marked to 1.91 percent, while it significantly decreased to 1.87 percent in the year 2011. If there were rampant conversions, as claimed by some, the Christian population, both in state and nation, should have seen a considerable increase in numbers. But the facts and figures indicate that a lot of hue and cry, over religious conversion, is unrealistically magnified and grossly exaggerated.

Hence, we, the Representatives of the Christian Community in Karnataka, strongly appeal to Your Excellency to refrain from giving ascent to such an undesirable and discriminatory Bill in the interest and welfare of the Christian minority community, and also to maintain peace, harmony and unity among all the religious communities in the State and in the Country.

We firmly hope that Your Excellency will comply with our earnest appeal and refrain from giving your ascent to the Protection of Religious Freedom Bill.

We invoke the abundant Blessings of God upon you and the entire State.

Thanking you in anticipation,

Yours sincerely,

✠ **Most Rev. Dr. Peter Machado**
Metropolitan Archbishop of Bangalore
President – Karnataka Region Catholic Bishops' Council
President – All Karnataka United Christian Forum for Human Rights

ARCHDIOCESE OF BANGALORE

Archbishop's House, No. 75 Miller's Road, Benson Town Post, Bengaluru-560 046
KARNATAKA, INDIA. Tel.: 91+ (080) 23330438 / 23330838 / 23339199
Archdiocese of Bangalore Bangalore Archdiocese

Most Rev. Peter Machado
Archbishop of Bangalore

E-mail: archbishop@bangalorearchdiocese.com
Web. : www.bangalorearchdiocese.org

Ref. No.:

ದಿನಾಂಕ: 16.05.2022

ರವರಿಗೆ–,
ಶ್ರೀ ಥಾವರ್ ಚಂದ್ ಗೆಹ್ಲೋಟ್,
ಕರ್ನಾಟಕದ ರಾಜ್ಯಪಾಲರು,
ರಾಜಭವನ, ರಾಜಭವನ ರಸ್ತೆ,
ಡಾ. ಅಂಬೇಡ್ಕರ್ ವೀದಿ,
ಬೆಂಗಳೂರು – 560 001

ಗೌರವಾನ್ವಿತ ರಾಜ್ಯಪಾಲರೇ,

ವಿಷಯ: ಕರ್ನಾಟಕ ಸರ್ಕಾರವು ಸುಗ್ರೀವಾಜ್ಞೆಯ ಮೂಲಕ ಜಾರಿಗೆ ತರಲು ಇಚ್ಛಿಸಿರುವ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಕಾಯ್ದೆಗೆ ಅಂಕಿತ ಹಾಕದಂತೆ ಕೋರಿ ಮನವಿ.

******

ಕರ್ನಾಟಕ ಸರ್ಕಾರವು "ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಕಾಯ್ದೆ" ಯನ್ನು ಸುಗ್ರೀವಾಜ್ಞೆಯ ಮೂಲಕ ಜಾರಿಗೊಳಿಸಲು ಚಿಂತನೆ ನಡೆಸುತ್ತಿದೆ. ಇದಕ್ಕೆ ಕರ್ನಾಟಕದ ಸಮಸ್ತ ಕ್ರೈಸ್ತ ಸಮುದಾಯವು ಒಮ್ಮನಿಸಿನಿಂದ ವಿರೋಧಿಸುತ್ತದೆ. ಈಗಾಗಲೇ ನಮ್ಮ ಸಂವಿಧಾನದ 25 ನೇ ಅನುಚ್ಛೇಧವು ಭಾರತದ ಪ್ರಜೆಗಳಿಗೆ ಯಾವುದೇ ಧರ್ಮವನ್ನು ಪ್ರತಿಪಾದಿಸಲು, ಆಚರಿಸಲು ಮತ್ತು ಅದನ್ನು ಪ್ರಕಟಿಸಲು ಹಕ್ಕುಗಳನ್ನು ನೀಡಿದೆ. ಅದೇ ರೀತಿ, 26 ನೇ ಅನುಚ್ಛೇದವು, ಧಾರ್ಮಿಕ ವಿಷಯಗಳಲ್ಲಿ ವಿವಿಧ ಪಂಗಡಗಳು ತಮ್ಮದೆ ಆದ ನೀತಿ–ನಿಯಮ, ರೀತಿ ರಿವಾಜುಗಳನ್ನು ಹೊಂದಬಹುದು ಎಂದೂ ಸಹ ಸ್ಪಷ್ಟವಾಗಿ ಹೇಳಿದೆ ಎಂಬುದನ್ನು ನೀವು ಅವಲೋಕಿಸಬೇಕು.

ಇನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ತನ್ನ ಸಭೆಯೊಂದರಲ್ಲಿ ರಾಜ್ಯದಲ್ಲಿನ ಕ್ರೈಸ್ತ ಸಮುದಾಯದ ಚರ್ಚುಗಳ ಮತ್ತು ಧಾರ್ಮಿಕ ಸಂಘ–ಸಂಸ್ಥೆಗಳ ಗಣತಿಯನ್ನು ನಡೆಸಬೇಕೆಂದು ಆದೇಶಿಸಿದೆ. ಈ ಗಣತಿಯ ಉದ್ದೇಶವಾದರೂ ಏನು? ಸರ್ಕಾರವು ಗಣತಿ ಮಾಡಬೇಕೆಂದರೆ ಮಾಡಲಿ. ಅದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ ನಮ್ಮ ಸಮುದಾಯವನ್ನು ಮಾತ್ರ ಗುರಿಯಾಗಿಸಿ ಗಣತಿಯನ್ನು ನಡೆಸಲು ಆದೇಶಿಸಿರುವುದೇಕೆ? ಅದಲ್ಲದೆ, ನಮ್ಮ ಚರ್ಚುಗಳ ವಿವರಗಳೆಲ್ಲವೂ ಈಗಾಗಲೇ ಸರ್ಕಾರದ ಬಳಿ ಇರುವಾಗ ಮತ್ತೊಮ್ಮೆ ಗಣತಿ ನಡೆಸುವ ಅಗತ್ಯವಾದರೂ ಏನು?

ಕರ್ನಾಟಕದಾದ್ಯಂತ, ಇನ್ನೂ ವಿಶಾಲವಾಗಿ ನೋಡುವುದಾದರೆ ಇಡೀ ಭಾರತದಾದ್ಯಂತ ಕಥೋಲಿಕ ಕ್ರೈಸ್ತ ಸಮುದಾಯವು ಸಾವಿರಾರು ಶಾಲಾ ಕಾಲೇಜುಗಳನ್ನು ನಡೆಸುತ್ತಿದೆ. ಪ್ರತಿ ವರ್ಷವೂ ಸಹ ಲಕ್ಷಾಂತರ ಮಕ್ಕಳು ನಮ್ಮ ಶಾಲೆಗಳಲ್ಲಿ ವ್ಯಾಸಾಂಗವನ್ನು ಮಾಡಿ, ತೇರ್ಗಡೆಯಾಗುತ್ತಿದ್ದಾರೆ. ನಮ್ಮ ಶಾಲೆಗಳಲ್ಲಿ ಕಲಿತ ನೂರಾರು ವಿದ್ಯಾರ್ಥಿಗಳು ರಾಜಕಾರಣಿಗಳು, ಉನ್ನತ ಮಟ್ಟದ ಅಧಿಕಾರಿಗಳು, ನ್ಯಾಯಾಧೀಶರುಗಳಾಗಿದ್ದಾರೆ. ಈಗಲೂ ಸಹ ಲಕ್ಷಾಂತರ ಮಕ್ಕಳು ನಮ್ಮ ಶಾಲಾ – ಕಾಲೇಜುಗಳಲ್ಲಿ

ಓದುತ್ತಿದ್ದಾರೆ. ಆದರೆ ಈವರೆಗೂ ಒಬ್ಬೇ ಒಬ್ಬ ವಿದ್ಯಾರ್ಥಿಯೂ ಸಹ ತನ್ನನ್ನು ಮತಾಂತರ ಮಾಡಲಾಗುತ್ತಿದೆ ಎಂದು ಆರೋಪಿಸಿಲ್ಲ. ಅಸಲಿಗೆ ಅಲ್ಲಿ ಮತಾಂತರವೇ ನಡೆಯುತ್ತಿಲ್ಲ ಎಂದ ಮೇಲೆ ಇನ್ನು ಆರೋಪದ ಮಾತು ಸತ್ಯಕ್ಕೆ ದೂರವೇ ಸರಿ.

ದೇಶದಾದ್ಯಂತ ಇರುವ ನಮ್ಮ ಕಥೋಲಿಕ ಆಸ್ಪತ್ರೆಗಳಲ್ಲಿ ಜಾತಿ, ಧರ್ಮದ ಬೇದವಿಲ್ಲದೆ ಲಕ್ಷಾಂತರ ಜನರು ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ನಮ್ಮ ಸೇವಾ ಇತಿಹಾಸದಲ್ಲೇ ಇದುವರೆಗೂ ಒಬ್ಬೇ ಒಬ್ಬ ರೋಗಿಯನ್ನು ಮತಾಂತರ ಮಾಡಿದ ನಿದರ್ಶನವಿಲ್ಲ. ನಾವು ಮಾಡುವುದು ಮಾನವೀಚಿು ಸೇವೆಯೇ ಹೊರತು, ಮತಾಂತರ ಉದ್ದೇಶವೆಂಬುದೇ ನಮಗಿಲ್ಲ. ಆದ್ದರಿಂದ ರಾಜ್ಯದಲ್ಲಾಗಲಿ ಅಥವಾ ದೇಶದಲ್ಲಾಗಲಿ ಮತಾಂತರ ನಿಷೇಧ ಕಾಯ್ದೆಯನ್ನು ಜಾರಿಗೆ ತರುವ ಅವಶ್ಯಕತೆ ಇರುವುದಿಲ್ಲ. ಭಾರತದ ಮೊದಲ ಜನಗಣತಿಯಿಂದ ಇಲ್ಲಿಯವರೆಗೂ ಸಹ ದೇಶದಲ್ಲಿ ಕ್ರೈಸ್ತ ಸಮುದಾಯದ ಜನಸಂಖ್ಯೆಯ ಅಂಕಿ-ಅಂಶಗಳು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಬಳಿ ಇವೆ. ಭಾರತದಲ್ಲಿ ದೊಡ್ಡ ಮಟ್ಟಿಗೆ ಮತಾಂತರ ನಡೆಯುತ್ತಿದೆ ಎಂದು ಆರೋಪಿಸುವವರು ಈ ಅಂಕಿ-ಅಂಶಗಳನ್ನು ಒಮ್ಮೆ ಪರಿಶೀಲಿಸಿದರೆ ಎಲ್ಲರಿಗೂ ಸತ್ಯಾಂಶವು ಅರಿವಾಗುವುದು. ಮತಾಂತರವು ನಿಜವೇ ಆಗಿದ್ದರೆ, ನಮ್ಮ ಸಮುದಾಯದ ಸಂಖ್ಯೆ ಇಷ್ಟೊತ್ತಿಗೆ ಅಧಿಕವಾಗಿರಬೇಕಿತ್ತು. ಆದರೆ, ದೇಶದ ಸ್ವಾತಂತ್ರ್ಯದ ನಂತರವೂ ಸಹ ಜನಸಂಖ್ಯೆಯಲ್ಲಿ ನಮ್ಮ ಸಮುದಾಯದ ಸಂಖ್ಯೆ ಕೇವಲ ಶೇ. 1.8 ರಷ್ಟು ಮಾತ್ರವಿದೆ. ವಸ್ತುಸ್ಥಿತಿ ಹೀಗಿರುವಾಗ, ರಾಜ್ಯದಲ್ಲಿ ನಡೆದ ಒಂದೆರಡು ಘಟನೆಗಳನ್ನೇ ಮುಂದಿಟ್ಟುಕೊಂಡು, ಇಡೀ ಸಮುದಾಯವನ್ನೇ ದೂಷಿಸುವುದು ಸರಿಯಲ್ಲ. ಮತಾಂತರ ನಿಷೇಧ ಕಾಯ್ದೆಯಂತಹ ಸಂವಿಧಾನ ವಿರೋಧಿ, ಕರಾಳ ಕಾಯ್ದೆಯನ್ನು ಜಾರಿಗೆ ತಂದು ಕ್ರೈಸ್ತ ಸಮುದಾಯವನ್ನು ಗುರಿಯಾಗಿಸುವುದು ಇದರ ಉದ್ದೇಶವಾಗಿದೆ ಎಂಬುದನ್ನು ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ತಾವು ಮನಗಾಣಬೇಕು.

ಕರ್ನಾಟಕದ ಕ್ರೈಸ್ತ ಸಮುದಾಯದ ಪ್ರತಿನಿಧಿಗಳಾದ ನಾವು ನಿಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ, ಅಂಕಿ ಅಂಶಗಳನ್ನೂ ಹಾಗೂ ಭಾರತದ ಘನತೆವೆತ್ತ ಸಂವಿಧಾನದಲ್ಲಿರುವ ಪ್ರಾವಿಷನ್‌ಗಳನ್ನು ಮತ್ತು ಮತಾಂತರ ಪ್ರಕರಣಗಳಲ್ಲಿ ಭಾರತದ ಕೋರ್ಟುಗಳು ಹಾಗೂ ಸರ್ವೋಚ್ಚ ನ್ಯಾಯಾಲಯ ನೀಡಿರುವ ಮಹತ್ತರ ತೀರ್ಪುಗಳನ್ನು ಅವಲೋಕಿಸಿ, ಕರ್ನಾಟಕದ ಕ್ರೈಸ್ತ ಸಮುದಾಯದ ಹಿತದೃಷ್ಟಿಯಿಂದ, ಕರ್ನಾಟಕ ಸರ್ಕಾರವು ಸುಗ್ರೀವಾಜ್ಞೆಯ ಮೂಲಕ ಜಾರಿಗೆ ತರಲು ಹೊರಟಿರುವ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕಕ್ಕೆ ತಾವು ಅಂಕಿತ ಹಾಕಬಾರದು ಎಂದು ವಿನಂತಿಸಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

Peter Machado
Archdiocese of Bangalore

✠ **ಪರಮಪೂಜ್ಯ ಡಾ. ಪೀಟರ್ ಮಚಾದೊ**
ಬೆಂಗಳೂರಿನ ಮೆಟ್ರೊಪಾಲಿಟನ್ ಆರ್ಚ್‌ಬಿಷಪ್
ಅಧ್ಯಕ್ಷರು-ಕರ್ನಾಟಕ ಪ್ರಾಂತೀಯ ಕಥೋಲಿಕ ಧರ್ಮಾಧ್ಯಕ್ಷರುಗಳ ಮಂಡಳಿ
ಅಧ್ಯಕ್ಷರು-ಅಖಿಲ ಕರ್ನಾಟಕ ಕ್ರೈಸ್ತ ಮಾನವ ಹಕ್ಕುಗಳ ಒಕ್ಕೂಟ ವೇದಿಕೆ